# ಸ್ವಾಮಿ ನಿಖಿಲಾನಂದ (೧೮೯೫-೧೯೭೩)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**

**ಭಾಗ ೨**



**ಮ**ಹಾರಾಜರು ನನಗೆ ಹೇಳಿದ್ದರು, ''ನೋಡು, ನೀನು ಈಗಷ್ಟೆ ಈ ದೇಶಕ್ಕೆ ಬಂದಿರುವೆ. ಶರೀರದೆಡೆ ಗಮನಕೊಡು. ದೇಹಾರೋಗ್ಯ ಕೆಟ್ಟರೆ ಠಾಕೂರರ ಕಾರ್ಯವನ್ನು ಮಾಡಲಾಗದು. ಧೈರ್ಯವನ್ನು ಬರೆ.''

ಆ ಬಳಿಕ ನಾನು ಅವರನ್ನು ವಿನಂತಿಸಿಕೊಂಡೆ, ''ಮಹಾರಾಜ್, ನೀವು ನನಗೊಂದು Gospel of Sri Ramakrishna ಪುಸ್ತಕದ ಪ್ರತಿಯನ್ನು ಉಡುಗೊರೆ ನೀಡುವಿರಾ?'' ತಕ್ಷಣವೆ ಅವರು ತಮ್ಮ ಸೇವಕರಿಗೆ, ''ಏನಪ್ಪ, ಒಂದು Gospel ತೆಗೆದುಕೊಂಡು ಬಾ'' ಎಂದರು. ಅದನ್ನು ನನಗೆ ಕೊಡಲು ಮುಂದಾದಾಗ, ''ಮಹಾರಾಜ್, ನೀವು ಅದನ್ನು ಆಟೋಗ್ರಾಫ್ ಮಾಡಿಕೊಡಿ,'' ಎಂದೆ. ನಗುತ್ತ ಅವರೆಂದರು, ''ನೋಡಿದೆಯಾ, ಯಾವ ಕ್ಷಣದಲ್ಲಿ ಅಮೆರಿಕಕ್ಕೆ ಕಾಲಿಟ್ಟೆಯೋ, ಆಗಲೆ ನೀನು ಅಮೆರಿಕನ್ ಆಗಿಬಿಟ್ಟೆ!''

ನಂತರ ಅವರು Gospelನ್ನು ತೆರೆದು ಬರೆದರು: 'To Chetananada from Nikhilananda, with love and best wishes — Nikhilananda, 10.06.1971.' ಪೂಜನೀಯ ಮಹಾರಾಜರು ಕೊಟ್ಟ ಪುಸ್ತಕಗಳು ಇಂದಿಗೂ ನನ್ನ ಬಳಿಯಲ್ಲಿವೆ.

ನಂತರ ಮಹಾರಾಜರು ತಮ್ಮ ಜತೆಯಲ್ಲಿ ನನ್ನನ್ನು ಊಟದ ಕೋಣೆಗೆ ಕರೆದುಕೊಂಡು ಹೋದರು. ಸ್ವಾಮಿ ಆದೀಶ್ವರಾನಂದರು ಆಗ ನಿಖಿಲಾನಂದರ ಸಹಕರ್ಮಿಗಳಾಗಿದ್ದರು. ಒಬ್ಬಳು ಅಡುಗೆಯವಳು ನಮಗಾಗಿ ಖಿಚುಡಿ, ಬದನೆಕಾಯಿ ಬಜ್ಜಿ, ಪಲ್ಯ, ಚಟ್ನಿ ಹಾಗೂ ಸಿಹಿತಿಂಡಿಗಳನ್ನು ತಯಾರಿಸಿ ಬಡಿಸಿದಳು. ಮರುದಿನ ನಾನು ಹಾಲಿವುಡ್‌ಗೆ ತೆರಳಿದೆ.

ಪ್ರತಿವರ್ಷ ಜುಲೈ-ಆಗಸ್ಟ್ ತಿಂಗಳನ್ನು ಸ್ವಾಮಿ ನಿಖಿಲಾನಂದರು ಸಹಸ್ರ ದ್ವೀಪೋದ್ಯಾನ (Thousand Islands Park)ದಲ್ಲಿ ತಮ್ಮ ಸೆಕೆಗಾಲದ ರಜೆ ಯನ್ನು ಕಳೆಯುತ್ತಿದ್ದರು. ೧೯೭೨ರ ಸೆಕೆಗಾಲದ ರಜೆಯಲ್ಲಿ ಸೇಂಟ್ ಲೂಯಿಸ್, ಶಿಕಾಗೊ, ಬಾಸ್ಟನ್ ದಾರಿಯಾಗಿ ಆಗಸ್ಟ್ ೧೪ರಂದು ಸಹಸ್ರ ದ್ವೀಪೋದ್ಯಾನಕ್ಕೆ ಹೋದ ನಾನು ೨೪ನೆ ಆಗಸ್ಟ್ ವರೆಗೆ ಅಲ್ಲಿದ್ದೆ. ಅಲ್ಲಿನ ಮೂರು ಕಾಟೇಜ್-ವಿವೇಕಾ ನಂದ ಕಾಟೇಜಿನಲ್ಲಿ ಸಾಧುಗಳೂ ಪುರುಷ ಭಕ್ತರೂ, ಶಾರದಾ ಕಾಟೇಜಿನಲ್ಲಿ ಮಹಿಳೆಯರೂ ಇರುತ್ತಿದ್ದರು. ಸ್ವಾಮಿ ನಿಖಿಲಾನಂದರ ಕಾಟೇಜ್ ಸೇಂಟ್ ಲಾರೆನ್ಸ್ ನದಿಯ ಸಮೀಪವಿತ್ತು. ಅದು ಅವರ ಉಪನಿಷತ್ತು ತರಗತಿಗಳು ಹಾಗೂ ಓದು-ಬರಹಗಳಿಗಾಗಿ ಮೀಸಲಾಗಿತ್ತು.

ಕ್ರಮೇಣವಾಗಿ ಮಹಾರಾಜರ ಸ್ಮೃತಿಶಕ್ತಿ ಕ್ಷೀಣವಾಗುತ್ತ ಹೋಯಿತು. ನನ್ನನ್ನು ''ನೀನು ಎಲ್ಲಿಂದ ಬಂದಿರುವೆ?'' ಎಂದಾಗ ನಾನು ''ಹಾಲಿವುಡ್''ನಿಂದ ಎಂದೆ. ಸ್ವಲ್ಪ ಹೊತ್ತಿನಲ್ಲಿ ಪುನಃ ಅದೇ ಪ್ರಶ್ನೆ ಕೇಳಿದರು. ವರಾಂಡಾದ ಈಜ಼ಿಚೇರ್‌ನಲ್ಲಿ ಕುಳಿತು ಸೇಂಟ್ ಲಾರೆನ್ಸ್ ನದಿಯ ಆ ಕಡೆ ಸೂರ್ಯಾಸ್ತವನ್ನು ನೋಡುತ್ತಿದ್ದರು. ನಾವು ಮಧ್ಯಾಹ್ನದ ಭೋಜನವನ್ನು ವಿವೇಕಾನಂದ ಕಾಟೇಜಿನಲ್ಲಿಯೂ, ರಾತ್ರಿಯದು ಶಾರದಾ ಕಾಟೇಜಿನಲ್ಲಿಯೂ ಮಾಡುತ್ತಿದ್ದೆವು. ಭಕ್ತ ಮಹಿಳೆಯರು ಅಡಿಗೆ ಮಾಡುತ್ತಿದ್ದರು. ಮಹಾರಾಜರು ಡೈನಿಂಗ್ ಟೇಬಲ್‌ನಲ್ಲಿ ನಾನಾ ಬಗೆಯ ಪ್ರಸಂಗಗಳನ್ನು ಹೇಳುತ್ತಿದ್ದರು. ಕಥೆ ಮತ್ತು ಹ್ಯೂಮರ್ ಅವರಿಗೆ ತುಂಬ ಅಚ್ಚುಮೆಚ್ಚು. ಆ ಹತ್ತು ದಿನಗಳನ್ನು ನಾನು ಅದೆಷ್ಟು ಆನಂದದಿಂದ ಕಳೆದಿದ್ದೆನೆಂಬುದನ್ನು ಹೇಳಲಾರೆ.

ಪ್ರತಿದಿನವೂ ಸಂಜೆ ೪ ಗಂಟೆಯ ಹೊತ್ತಿಗೆ ಮಹಾರಾಜರನ್ನು ವಿವೇಕಾನಂದ ಕಾಟೇಜಿಗೆ ಕಾರಿನಲ್ಲಿ ಕರೆತಂದು, ನಂತರ ಗಾಲಿ ಕುರ್ಚಿಯಲ್ಲಿ ಕುಳ್ಳಿರಿಸಿ ಕೆಳ ಅಂತಸ್ತಿನ ಬೈಠಕ್‌ಖಾನೆಯಲ್ಲಿ ಕುಳ್ಳಿರಿಸಲಾಗುತ್ತಿತ್ತು. ಬಳಿಕ ನಾವೆಲ್ಲ ಒಟ್ಟಿಗೆ ಚಹಾ ಕುಡಿಯುತ್ತಿದ್ದೆವು. ನಂತರ ೫ ಗಂಟೆಗೆ ಮಹಡಿಯ ಕೋಣೆಯಲ್ಲಿ ಆರತಿ ಹಾಗೂ ಜಪಧ್ಯಾನ ನಡೆಯುತ್ತಿತ್ತು. ಅಲ್ಲಿ ಶ್ರೀಮಾತೆಯವರ ಮೂಲ ಪದಚಿಹ್ನೆಯಿತ್ತು. ಮಿಸೆಸ್ ಲೆಗೆಟ್‌ಗೆ ಸ್ವಾಮೀಜಿ ಕೊಟ್ಟಿದ್ದ ಒಂದು ದೊಡ್ಡ ಕಾರ್ಪೆಟ್‌ನ ಮೇಲೆ ನಾವು ಕುಳಿತುಕೊಳ್ಳು

ತ್ತಿದ್ದೆವು. ಸ್ವಾಮಿ ಆದೀಶ್ವರಾನಂದರು ಹಾರ್ಮೋನಿಯಮ್ ನುಡಿಸುತ್ತ ಆರಾತ್ರಿಕ ಭಜನೆಯನ್ನು ಪ್ರಾರಂಭಿಸುತ್ತಿದ್ದರು.

ಸ್ವಾಮಿ ನಿಖಿಲಾನಂದರಿಗೆ ಹಿಂದೆ, ಸ್ವಾಮೀಜಿಯ ಕಂಚಿನ ಮೂರ್ತಿಯ ಪಕ್ಕದಲ್ಲಿ ಒಂದು ಕುರ್ಚಿಯನ್ನಿರಿಸಲಾಗಿತ್ತು. ಅವರು ಅದರಲ್ಲಿ ಕುಳಿತು ಮಾಲೆಯನ್ನು ಹಿಡಿದು ಜಪಿಸುತ್ತಿದ್ದರು. ಆಗ ಅವರಿಗೆ ಸಮಯದ ಅರಿವಿರುತ್ತಿರಲಿಲ್ಲ. ಏಕಾಗ್ರಚಿತ್ತರಾಗಿ ಜಪ ಮಾಡುವಾಗ ಅವರ ಕಣ್ಣುಗಳಿಂದ ನೀರು ಸುರಿಯುತ್ತಿತ್ತು. ಒಂದು ಗಂಟೆಯ ನಂತರ ಕೆಳಗಿಳಿಯುವಾಗ ಶ್ರೀಮಾತೆಯವರ ಈ ಶಿಷ್ಯರು ಜಪದಲ್ಲಿ ಸಂಪೂರ್ಣ ಮುಳುಗಿದ್ದುದನ್ನು ನಾನು ಕಣ್ಣಾರೆ ಕಂಡಿರುವೆ. ನಿಜವಾಗಿಯೂ ಈ ದೃಶ್ಯವನ್ನು ಮರೆಯಲಾರೆ. ಇದೇ ನನಗೆ ಅವರ ಕಡೆಯ ದರ್ಶನ.

೧೯೭೩ರಲ್ಲಿ ಅವರು ಪುನಃ 'ಸಹಸ್ರ ದ್ವೀಪೋದ್ಯಾನ'ಕ್ಕೆ ಹೋದರು. ಜುಲೈ ೨೧ರಂದು ಮಹಾರಾಜರು ಡಿನ್ನರ್ ಟೇಬಲ್‌ಗೆ ಬಂದು ಕುರ್ಚಿಯಲ್ಲಿ ಕುಳಿತರು. ಭಕ್ತರು ಅವರೆದುರು ಭೋಜನ ವನ್ನು ಇರಿಸಿದ ಬಳಿಕ ಎಲ್ಲರೂ ಏಕಸ್ವರದಲ್ಲಿ '**ಬ್ರಹ್ಮಾರ್ಪಣಂ ಬ್ರಹ್ಮ ಹವಿಃ ಬ್ರಹ್ಮಾಗ್ನೌ ಬ್ರಹ್ಮಣಾ ಹುತಂ । ಬ್ರಹ್ಮೈವ ತೇನ ಗಂತವ್ಯಂ ಬ್ರಹ್ಮಕರ್ಮ ಸಮಾಧಿನಾ॥**' ಎಂದು ಪಠಿಸಿದರು. ಪಠಣವು ಕೊನೆಗೊಳ್ಳುತ್ತಿದ್ದಂತೆಯೆ ಕುರ್ಚಿಯಲ್ಲಿ ಕುಳಿತಿದ್ದ ಅವರು ದೇಹವನ್ನು ತ್ಯಜಿಸಿದರು. ಗೀತೆಯ ಈ ಮಂತ್ರದ ಅರ್ಥ ಹೀಗಿದೆ: ''ಬ್ರಹ್ಮವಿದನು ಹವನ ದ್ರವ್ಯದ ಅರ್ಪಣೆ, ಘೃತ, ಹೋಮಾಗ್ನಿ, ಆಹುತಿ ನೀಡುತ್ತಿರುವ ಯಜಮಾನ ಮತ್ತು ಹೋಮ ಕ್ರಿಯೆಯನ್ನು ಬ್ರಹ್ಮವೆಂದು ತಿಳಿಯುತ್ತಾನೆ. ಅವನ ದೃಷ್ಟಿಯಲ್ಲಿ ಬ್ರಹ್ಮರೂಪ ಕರ್ಮದಲ್ಲಿ ಸಮಾಹಿತಚಿತ್ತ ವ್ಯಕ್ತಿಯು ಪಡೆಯುವ ಫಲವೂ ಬ್ರಹ್ಮವೇ.''

ರಾಮಕೃಷ್ಣ ಸಂಘದ ಲೇಖಕರೂ, ಸುವಾಗ್ಮಿಗಳು, ಸುಸಂಸ್ಕೃತರೂ ವಿದ್ವಾಂಸರೂ ಆಗಿದ್ದ ಈ ಸಾಧುಗಳ ಜೀವನವು ಸಾರ್ಥಕವಾಗಿದ್ದಂತೆಯೆ ಇವರ ಮರಣವೂ ಅಪೂರ್ವವಾಗಿತ್ತು.

ಲೇಖನ ಮುಗಿದ ಬಳಿಕ ಮತ್ತೂ ಬರೆಯುತ್ತಿರುವೆ. ರಾಮಕೃಷ್ಣ ಮಿಷನ್ನಿನ ಅನೇಕ ಸಾಧುಗಳು ಉಪನಿಷತ್ತು, ಗೀತೆ ಹಾಗೂ ಇತರ ವೇದಾಂತ ಶಾಸ್ತ್ರಗಳನ್ನು ಇಂಗ್ಲಿಷಿಗೆ ತರ್ಜುಮೆ ಮಾಡಿದ್ದಾರೆ. ಇವುಗಳಲ್ಲಿ ಹೆಚ್ಚಿನ ಅನುವಾದಗಳು ಅಕ್ಷರಶಃ, ನಿಶ್ಚೇಷ್ಟಿತ ಹಾಗೂ ಪಾಶ್ಚಾತ್ಯ ಓದುಗರಿಗೆ ಅರ್ಥವಾಗದವು. ಕೇವಲ ರಾಮಕೃಷ್ಣ ಮಿಷನ್ನಿನ ಸಾಧುಗಳ ಅನುವಾದಗಳು ಮಾತ್ರವಲ್ಲ, ಭಾರತದ ಹೆಚ್ಚಿನ ವಿದ್ವಾಂಸರ ಇಂಗ್ಲಿಷ್ ಅನುವಾದ ಭಾವಾನುವಾದಗಳಾಗಿದ್ದು, ಸ್ವಲ್ಪವೂ ಮೂಲಕ್ಕೆ ವಿಧೇಯವಾಗಿಲ್ಲ. ಆ ವಿಷಯವಾಗಿ ಸ್ವಾಮಿ ನಿಖಿಲಾನಂದರ ಉಪನಿಷತ್ತು ಹಾಗೂ ಗೀತೆಯ ಅನುವಾದವು ಅತ್ಯಂತ ವಿಧೇಯ ಹಾಗೂ ಸೌಂದರ್ಯಪೂರ್ಣವಾಗಿದ್ದು, ಪಾಶ್ಚಾತ್ಯ ಬುದ್ಧಿಜೀವಿಗಳ ಸಮಾಜದಲ್ಲಿ ಗೌರವ ಸ್ಥಾನವನ್ನು ಪಡೆದಿದೆ. ಇದು ರಾಮಕೃಷ್ಣ ಸಂಘಕ್ಕೆ ಹೆಮ್ಮೆಯ ವಿಷಯವೇ ಸರಿ. ಶ್ರೀರಾಮಕೃಷ್ಣರು 'ಗುಣಶಾಲಿಯಾದವನ ಗುಣಗಳಿಗೆ ತಕ್ಕ ಮರ್ಯಾದೆಯನ್ನು ನೀಡಬೇಕು' ಎನ್ನುತ್ತಿದ್ದರು.

ನಾನು ಬ್ರಹ್ಮಚಾರಿಯಾಗಿದ್ದಾಗ ನಿಖಿಲಾನಂದರ ಲೇಖನಗಳನ್ನು ಕಂಡರೆ ಅವುಗಳನ್ನು ತಪ್ಪದೆ ಓದುತ್ತಿದ್ದೆ. ಅವುಗಳು ಆಂತರಿಕತೆ, ಸರಸತೆ, ಸರಳತೆ, ಮಾದಕತೆ ಹಾಗೂ ನೂತನತೆಯನ್ನೊಡಗೊಂಡಿದ್ದವು. ನಾನು ಮೊದಲಿನಿಂದಲೂ ನೂತನತೆಯ ಆರಾಧಕ. ನಾವು ಠಾಕೂರರ ಸಂನ್ಯಾಸಿ ಶಿಷ್ಯರನ್ನು ಕಂಡಿಲ್ಲದಿದ್ದರೂ ಅವರ ಸಂಗಲಾಭವನ್ನು ಪಡೆದು ನೆನಪುಗಳನ್ನು ವ್ಯಕ್ತಪಡಿಸಿರುವವರ ಸಾನ್ನಿಧ್ಯ ಪಡೆದಿರುವೆವು. ಅವುಗಳು ನಮ್ಮ ಅಧ್ಯಾತ್ಮ ಸಂಪತ್ತು. ನಿಖಿಲಾನಂದರ ಮೂರು ಸ್ಮೃತಿಕಥೆಗಳು ನನ್ನ ಬಳಿ ಅವಿಸ್ಮರಣೀಯವಾಗಿವೆ. 'Vedanta and the West' ಪತ್ರಿಕೆಯ ೧೨೭ನೆಯ ಸಂಚಿಕೆಯಲ್ಲಿ ಪ್ರಕಟವಾದ ಸ್ವಾಮಿ ನಿಖಿಲಾನಂದರ 'ಪ್ರೇಮಾನಂದರ ಸ್ಮೃತಿ'ಯನ್ನು ನಾನು ಇಂಗ್ಲಿಷಿನಿಂದ ಬಂಗಾಳಿಗೆ ಅನುವಾದಿಸಿಕೊಟ್ಟೆ; ಅದು 'ಉದ್ಬೋಧನ' ಪತ್ರಿಕೆಯ ೭೨ನೇ ವರ್ಷದ ೬ನೆ ಸಂಚಿಕೆಯಲ್ಲಿ ಪ್ರಕಟವಾಯಿತು.

### ಪ್ರಥಮ ಸ್ಮೃತಿ

ಸ್ವಾಮಿ ಬ್ರಹ್ಮಾನಂದ ಹಾಗೂ ಪ್ರೇಮಾನಂದರು ೧೯೧೬ರಲ್ಲಿ ಢಾಕಾಗೆ ಹೋದರು. ಆಗ ಇನ್ನೂ ವಿದ್ಯಾರ್ಥಿಯಾಗಿದ್ದ ನಿಖಿಲಾನಂದರು ವಿಪ್ಲವ ದಳಕ್ಕೆ ಸೇರಿದ್ದರು. ಅವರ ಸ್ಮೃತಿಕತೆ:

ನಾನು ಹೇಳಿದೆ, ''ಆದರೆ ಮಹಾಶಯರೆ, ನೀವುಗಳು ಸ್ವಾಮಿ ವಿವೇಕಾನಂದರನ್ನು ಅರ್ಥ ಮಾಡಿಕೊಂಡಿಲ್ಲ. ಭಾರತದ ಸ್ವಾತಂತ್ರ್ಯಕ್ಕಾಗಿ ನಮ್ಮ ರಕ್ತವನ್ನೂ ನೀಡಬೇಕೆಂಬುದಾಗಿ ಅವರ ಪುಸ್ತಕಗಳಲ್ಲಿ ನಾವು ಓದಿದ್ದೇವೆ. ವಿಪ್ಲವಿಗಳು ಹಾಗೆ ಮಾಡುತ್ತಲೂ ಇರುವರು. ನೀವುಗಳು ಸ್ವಾಮೀಜಿಯವರ ಉಪದೇಶಗಳನ್ನು ಅರ್ಥಮಾಡಿಕೊಂಡಿಲ್ಲ.''

ಇಂಥ ಮಾತುಗಳನ್ನು ಪ್ರೇಮಾನಂದರಿಂದ ಸಹಿಸಲಾಗಲಿಲ್ಲ. ಅವರು ಸಿಡಿದೆದ್ದರು. ''ಮೂರ್ಖ ಹುಡುಗರ ತಂಡ! ನೀವು ಯಾರೊಡನೆ ಮಾತನಾಡುತ್ತಿರುವಿರೆಂದು ತಿಳಿದಿದೆಯಾ? ಇಪ್ಪತ್ತಕ್ಕೂ ಹೆಚ್ಚು ವರ್ಷಗಳಿಂದ ನಾವು ಸ್ವಾಮೀಜಿಯನ್ನು ಬಲ್ಲೆವು. ನಾವು ಅವರೊಂದಿಗೆ ತಿಂದಿದ್ದೇವೆ, ಆಡಿದ್ದೇವೆ, ಮಾತನಾಡಿದ್ದೇವೆ, ನಮ್ಮ ಕಾರ್ಯಪಥದ ಬಗ್ಗೆ ಚಿಂತನೆ ಮಾಡಿದ್ದೇವೆ. ನೀವು ಅವರನ್ನು ತಿಳಿದಿಲ್ಲ! ಅವಿವೇಕಿಗಳು ನೀವು! ಸ್ವಾಮೀಜಿಯ ಪುಸ್ತಕಗಳ ಒಂದೆರಡು ಪುಟಗಳನ್ನೋದಿ ಅವರನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡಿರುವಿರಿ ಎಂದು ಭಾವಿಸುತ್ತೀರಾ?''

ನಂತರ ಪ್ರೇಮಾನಂದರು ಬ್ರಹ್ಮಾನಂದಜಿಯವರೆಡೆ ತಿರುಗಿ, ''ಮಹಾರಾಜ್, ಈ ಮೂರ್ಖರ ಮಾತುಗಳನ್ನು ಕೇಳಿದಿರೇನು? 'ನೀವು ಸ್ವಾಮೀಜಿಯನ್ನು ಅರ್ಥಮಾಡಿಕೊಂಡಿಲ್ಲ ಎನ್ನುತ್ತಿದ್ದಾರೆ.

ಒಂದು ಕುದುರೆಗಿಂತಲೂ ಹೆಚ್ಚು ಬುದ್ಧಿ ಇವರಿಗೆಲ್ಲ ಇದೆಯೆಂದು ನಿಮಗನ್ನಿಸುತ್ತಿದೆಯೆ?''

ಥಟ್ಟನೆ ಅವರು ಹಾಸಿಗೆಯಿಂದೆದ್ದು ನನ್ನ ಕೈಕಾಲುಗಳನ್ನು ಬಗ್ಗಿಸಿ ಕುದುರೆಯಂತೆ ನಿಲ್ಲಲು ಹೇಳಿದರು. ನನ್ನ ಎರಡು ಪಕ್ಕದಲ್ಲಿ ತಮ್ಮ ಎರಡು ಕಾಲುಗಳನ್ನು ನೇತಾಡಿಸುತ್ತ ಕುಳಿತು ಕೋಣೆಯ ಸುತ್ತಲೂ ತಮ್ಮನ್ನು ಸುತ್ತಾಡಿಸಲು ಆದೇಶಿಸಿದರು. ನಾನಾಗ ನಿಜವಾಗಿಯೂ ಕುದುರೆಯಂತಿದ್ದೆ! ಅವರ ಆಜ್ಞೆಯನ್ನು ಪಾಲಿಸಿದೆ. ಒಂದೆರಡು ನಿಮಿಷಗಳಲ್ಲಿ ಅವರು ನನ್ನ ಮೇಲಿಂದ ಇಳಿದು ''ಎಲ್ಲವೂ ಸರಿಹೋಗುತ್ತದೆ'' ಎಂದರು.

### ದ್ವಿತೀಯ ಸ್ಮೃತಿ

ಸಾಧು ಜೀವನದಲ್ಲಿ ಸಮತೋಲನದ ಜೀವನವನ್ನು ಹೇಗೆ ಪಡೆಯುವುದೆಂಬುದರ ಬಗ್ಗೆ ಸ್ವಾಮಿ ಶಾರದಾನಂದರು ಏನು ಹೇಳಿದ್ದರೆಂಬುದನ್ನು ನಿಖಿಲಾನಂದರು ಬರೆದರು.

''ಕೆಲಸದಲ್ಲಿ ಸದಾ ತೊಡಗಿರುವುದೆ ನನ್ನ ಸ್ವಭಾವ. ಒಂದು ದಿನ ಶಾರದಾನಂದಜೀ ಹೇಳಿದರು, 'ಕರ್ಮನಿರತನಾಗಿರುವುದು ಒಳ್ಳೆಯದು. ಆದರೆ ಅದು ಪರಿಸ್ಥಿತಿಗಳನ್ನವಲಂಬಿಸಿದೆ. ಆರೋಗ್ಯವೂ ಚೆನ್ನಾಗಿರಬೇಕು ಹಾಗೂ ಇದಕ್ಕಾಗಿ ಸಹಕರ್ಮಿಗಳೊಂದಿಗೆ ಚೆನ್ನಾಗಿ ಬೆರೆಯುವ ಸ್ವಭಾವವೂ ಇರಬೇಕು. ನಿನ್ನ ಶರೀರದ ಯಾವುದೇ ಅಂಗವು ತೊಂದರೆ ನೀಡಿದ ಪಕ್ಷದಲ್ಲಿ ಕೆಲಸ ಮಾಡುವುದು ಬಹಳ ಕಷ್ಟವೆನಿಸುವುದು. ಆದ್ದರಿಂದ, ಓದು-ಅಧ್ಯಯನದಲ್ಲೂ ಮನಸ್ಸನ್ನಿಡು. ಆದರೆ ಅದೂ ಸಾಲದು. ಒಂದು ವೇಳೆ ಅಂಧನಾದರೆ, ಆಗೇನು ಮಾಡುವೆ? ಅದಕ್ಕಾಗಿ ಧ್ಯಾನವನ್ನು ಮಾಡಬಹುದು.''

### ತೃತೀಯ ಸ್ಮೃತಿ

ಅನೇಕ ವೇಳೆ ಶಾಸ್ತ್ರವಾಕ್ಯಗಳು ಹಾಗೂ ರಾಮಕೃಷ್ಣರ ನುಡಿಗಳ ನಡುವೆ ಸಾಮಂಜಸ್ಯ ಕಂಡುಬರುವುದಿಲ್ಲ. ಮರಣಾನಂತರ ಏನಾಗುವುದೆಂಬುದು ಚರ್ಚಿತವಾದ ವಿಷಯ. ನಿಖಿಲಾನಂದರು ಈ ಬಗ್ಗೆ ಸ್ವಾಮಿ ಶಿವಾನಂದರ ಸ್ಮೃತಿಕಥೆಯಲ್ಲಿ ಒಂದು ಅಪೂರ್ವ ಸಮಾಧಾನವನ್ನು ಕಂಡಿದ್ದರು:

ಮಹಾಪುರುಷ ಮಹಾರಾಜರನ್ನು ನಾನೆಂದೂ ಯಾವುದೇ ಆಧ್ಯಾತ್ಮಿಕ ಹಾಗೂ ದಾರ್ಶನಿಕ ಪ್ರಶ್ನೆಯನ್ನು ಕೇಳಿರುವುದು ನನಗೆ ನೆನಪಿಲ್ಲ. ಅವರು ಸ್ವತಃ ಎಂದೂ ತಾವು ವಿದ್ವಾಂಸರೆಂದಾಗಲಿ, ದಾರ್ಶನಿಕರೆಂದಾಗಲಿ ಹೇಳಿಕೊಳ್ಳುತ್ತಿರಲಿಲ್ಲ. ಭಕ್ತರಿಗೆ ಅವರು ನೀಡುತ್ತಿದ್ದ ನಿರ್ದೇಶನಗಳಾಗಲಿ ಉಪದೇಶಗಳಾಗಲಿ, ತಮ್ಮ ಸ್ವಂತ ಅನುಭವದ ಮೇಲೆ ಆಧಾರಿತವಾಗಿರುತ್ತಿದ್ದವು. ಅವರ ನುಡಿಗಳು ಸರಳವೂ ಸಹಜವೂ ಆಗಿರುತ್ತಿದ್ದವು. ತಾವು ಶ್ರೀರಾಮಕೃಷ್ಣರು ಆಡಿಸುವ ಯಂತ್ರ ಮಾತ್ರವಷ್ಟೆ. ಅವರ ಇಚ್ಛೆಯಂತೆಯೆ ತಾವು ಜೀವನದ ಸಮಸ್ತ ಕಾರ್ಯಗಳನ್ನು ನಿರ್ವಹಿಸುತ್ತಿರುವುದಾಗಿಯೂ, ತಮ್ಮ ಚಿಂತನೆ ಹಾಗೂ ನುಡಿಗಳು ನಿಯಂತ್ರಿತವಾಗಿರುವುವೆಂಬ ಅಖಂಡ ವಿಶ್ವಾಸವೂ ಅವರಿಗಿತ್ತು. ಅಹಂಕಾರದ ಲೇಶ ಮಾತ್ರವೂ ಅವರಿಗಿರಲಿಲ್ಲ. ಒಂದು ದಿನ ಅತ್ಯಂತ ವಿವಾದಾಸ್ಪದ ಪ್ರಶ್ನೆಯೊಂದನ್ನು ನಾನು ಅವರ ಮುಂದಿಟ್ಟೆ: ''ಶ್ರೀರಾಮಕೃಷ್ಣರ ಆಶ್ರಯಕ್ಕೆ ಬಂದವರಿಗೆ ಇದೇ ಕೊನೆಯ ಜನ್ಮವೆಂಬುದು ಸತ್ಯವೆ?'' ಉತ್ತರವಾಗಿ ಅವರು, ಇದು ಸತ್ಯವೆಂದೇ ತಮ್ಮ ವಿಶ್ವಾಸ ಎಂದು ಹೇಳಿದ್ದರು. ತರ್ಕವನ್ನು ಪ್ರಾರಂಭಿಸುತ್ತ, 'ಶಾಸ್ತ್ರಗಳ ಪ್ರಕಾರ ನಿರ್ವಾಸನತ್ವವನ್ನು ಪಡೆಯುವ ತನಕ ಪುನರ್ಜನ್ಮವನ್ನು ತಪ್ಪಿಸಿಕೊಳ್ಳಲಾಗದು; ಹಾಗೆಂದ ಮೇಲೆ ಇದು ಸತ್ಯವಾಗುವುದಾದರೂ ಹೇಗೆ?' ಎಂದು ಕೇಳಿದ್ದೆ. ಆಗ ಮಹಾರಾಜರು ಹೇಳಿದರು, ''ನೋಡು, ನಾನು ಪಂಡಿತನೂ ಅಲ್ಲ, ಶಾಸ್ತ್ರಜ್ಞನೂ ಅಲ್ಲ. ಆದರೆ ಪುನರ್ಜನ್ಮಕ್ಕೆ 'ಕಾರಣ' ಏನೆಂಬುದನ್ನು ಹೇಳಬಲ್ಲೆಯಾ? ಅಪೂರ್ಣ ವಾಸನೆಗಳು ಅದಕ್ಕೆ ಕಾರಣವಲ್ಲವೆ?'' ನಾನೆಂದಿದ್ದೆ, ''ಹೌದು, ಅದು ಸರಿಯೆ.'' ''ಹಾಗಾದರೆ, ಕಲ್ಪನೆ ಮಾಡಿಕೊ, ನಿನ್ನ ಮರಣ ಕಾಲದಲ್ಲಿ ಶ್ರೀರಾಮಕೃಷ್ಣರು ನಿನ್ನೆದುರು ನಿಂತು ಕೇಳುತ್ತಿದ್ದಾರೆ – 'ನೀನು ಮತ್ತೆ ಭೂಮಿಯಲ್ಲಿ ಜನ್ಮಗ್ರಹಣ ಮಾಡಬೇಕಾಗುವಂತಹ ಅಪೂರ್ಣ ಕಾಮನೆಗಳು ನಿನಗಿವೆಯೆ?' ಎಂದು. ಆಗ ನೀನೇನನ್ನುತ್ತಿ ?'' ''ಭೂಮಿಯಲ್ಲಿ ಮತ್ತೆ ಜನ್ಮ ತಳೆಯುವಂತಹ ಅಪೂರ್ಣ ಆಸೆಗಳೇನೂ ಇದೆಯೆಂದು ನನಗನ್ನಿಸುವುದಿಲ್ಲ, ಎನ್ನುವೆ.'' ''ಮತ್ತೆ ? ಹಾಗೆಂದ ಮೇಲೆ ಇದೇ ನಿನ್ನ ಕೊನೆಯ ಜನ್ಮವೆಂದಾಯಿತಲ್ಲ. ಮರಣಕಾಲದಲ್ಲಿ ಆತನ ದರ್ಶನವನ್ನು ಪಡೆದರೆ, ಭಗವಂತನ ಕೃಪೆಯಿಂದಲೇ ನಿರ್ವಾಸನಾಭಾವವು ಉಂಟಾಗುತ್ತದೆ'' ಎಂದು ಮಹಾರಾಜರು ಉತ್ತರಿಸಿದರು.

ಸ್ವಾಮಿ ನಿಖಿಲಾನಂದರು ರಾಮಕೃಷ್ಣ ಸಂಘದ ಬೌದ್ಧಿಕ ಕ್ಷೇತ್ರದಲ್ಲಿ ಚಿರಮುದ್ರೆಯನ್ನಿರಿಸಿ ಹೋಗಿದ್ದಾರೆ. ಸಾಧಕ ಜೀವನ ಅವರದು! *(ಮುಂದುವರಿಯುವುದು)*

ಶ್ರೀರಾಮಕೃಷ್ಣರು ವಿದ್ಯಾವಂತರಿಗೂ, ಅನಕ್ಷರಸ್ಥರಿಗೂ ಬೇಕಾದವರು. ಎಲ್ಲ ಜ್ಞಾನಗಳ ಸಾರ ಅವರ 'ವಚನವೇದ'ದಲ್ಲಿದೆ. ಅಲ್ಲಿ ಅವರು ಹೇಳಿದ್ದೆಲ್ಲವೂ ಅವರ ಗ್ರಾಮೀಣ ಸೊಗಡಿನ ಭಾಷೆಯಲ್ಲಿ.

ಅವರ ಜೀವನವು ಎಲ್ಲ ಧರ್ಮಗಳ ಎಲ್ಲ ಮಾರ್ಗಗಳನ್ನೂ ಅಭಿವ್ಯಕ್ತಿಗೊಳಿಸಿದೆ ಎಂದು ಇಡೀ ವಿಶ್ವದ ಜ್ಞಾನಿಗಳು ತಿಳಿದುಕೊಂಡಿದ್ದಾರೆ.

ಶ್ರೀರಾಮಕೃಷ್ಣರು ಒಂದು ಮಹಾಸಾಗರದಂತೆ, ಎಷ್ಟೊಂದು ವಿಶಾಲ! ಎಷ್ಟೊಂದು ಅಗಾಧ ! ಮತ್ತೆ ಮತ್ತೆ ನಾನು ಕೇಳುತ್ತೇನೆ, ''ಅವರು ಯಾರು?''

*— ಆಶಾಪೂರ್ಣಾ ದೇವಿ (ಪ್ರಸಿದ್ಧ ಬಂಗಾಳಿ ಲೇಖಕಿ)*